ಅ) ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿಗಳು

ಆ) ವಲಯ ಅತರಣ್ಯಾಧಿಕಾರಿಗಳು

ಉ) ಕಳೆದ 3 ವರ್ಷಗಳಿಂದ 10 ವಲಯ ಅರಣ್ಯಧಿಕಾರಿಗಳ ಹುದ್ದೆಗೆ 3 ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿಗಳ ಹುದ್ದೆಗೆ ಅರಣ್ಯ ಇಲಾಖೆಯಲ್ಲಿ ನೇಮಕಾತಿ ಮಾಡಲಾಗಿದೆ.

1240 (1607) ಶ್ರೀ ಧ್ರುವನಾರಾಯಣ ಆರ್.(ಸಂತೇಮರಳ್ಳಿ) : ಮಾನ್ಯ ಸಣ್ಣ ಕೈಗಾರಿಕಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿರುವ ಕೆ.ಎಸ್.ಎಸ್.ಐ.ಡಿ.ಸಿ. ವತಿಯಿಂದ ಎಷ್ಟು ಕೈಗಾರಿಕಾ ಪ್ರದೇಶಗಳನ್ನು ಸ್ಥಾಪಿಸಲಾಗಿದೆ;

ಆ) ಈ ಕೈಗಾರಿಕೆಗಳ ಸ್ಥಾಪನೆಗಾಗಿ ರಾಜ್ಯಾದ್ಯಂತ ಒಟ್ಟು ಎಷ್ಟು ಶೆಡ್‌ಗಳನ್ನು ವಿತರಿಸಲಾಗಿದೆ;

ಇ) ಶೆಡ್‌ಗಳ ವಿತರಣೆಯಲ್ಲಿ ಅನುಸರಿಸುತ್ತಿರುವ ಮೀಸಲಾತಿಯ ಕ್ರಮಗಳೇನು ತಿಳಿಸುವುದು?

ಶ್ರೀ ಶಿವಾನಂದ ಎನ್. ನಾಯ್ಕ (ಸಣ್ಣ ಕೈಗಾರಿಕಾ ಸಚಿವರು) :

ಅ) ರಾಜ್ಯದಲ್ಲಿ ಒಟ್ಟು 158 ಕೈಗಾರಿಕಾ ವಸಾಹತುಗಳನ್ನು ಕೆ.ಎಸ್.ಎಸ್.ಐ.ಡಿ.ಸಿ ರವರು ಸ್ಥಾಪಿಸಿರುತ್ತಾರೆ.

ಆ) ಒಟ್ಟು, 5.756 ಮಳಿಗೆಗಳನ್ನು ನಿರ್ಮಿಸಿದ್ದು, ಇವುಗಳಲ್ಲಿ, 5,300 ಮಳಿಗೆಗಳನ್ನು ವಿತರಿಸಲಾಗಿದೆ.

ಇ) 2005ರಲ್ಲಿ ಹೊರತಂದ ಹಂಚಿಕೆ ನಿಯಾಮವಳಿಗಳ ಪ್ರಕಾರ ಸಾಮಾನ್ಯ ಹಂಚಿಕೆಯಲ್ಲಿ (ರೆಗ್ಯೂಲರ್ ಅಲಟ್ ಮೆಂಟ್) ಕೆಳಕಂಡಂತೆ ಮೀಸಲಾತಿಯನ್ನು ಕಲ್ಪಿಸಲಾಗಿದೆ.

1. ಪರಿಶಿಷ್ಟ ಜಾತಿ : ಶೇ.15
2. ಪರಿಶಿಷ್ಟ ಪಂಗಡ : ಶೇ.3
3. ಅಲೆಮಾರಿ ಜನಾಂಗ : ಶೇ.2
4. ಮಹಿಳೆಯರು ಒಟ್ಟಾರೆ : ಶೇ.30
5. ಅಂಗವಿಕಲರು : ಶೇ.3

ಪರಿಶಿಷ್ಟ ಜಾತಿ/ ಪರಿಶಿಷ್ಟ ಪಂಗಡದವರಿಗೆ ನಿಗಮದಲ್ಲಿ ಪ್ರತ್ಯೇಕ ಕೈಗಾರಿಕಾ ವಸಾಹತುವನ್ನು ಜಿಗಣಿ 1ನೇ ಹಂತದಲ್ಲಿ ಸ್ಥಾಪಿಸಿ 100

ಮಳಿಗೆಗಳನ್ನು ಮತ್ತು 84 ನಿವೇಶನಗಳನ್ನು ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದವರಿಗೆ ಹಂಚಿಕೆ ಮಾಡಲಾಗಿದೆ, ದಿನಾಂಕ: 14–122006ರ ಕಛೇರಿ ಆದೇಶದಂತೆ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದವರಿಗೆ ಹಂಚಿಕೆಯಾದ ಮಳಿಗೆಗಳಿಗೆ ಶೇಕಡಾ 40 ರಷ್ಟು ಅಥವಾ ರೂ.2.00 ಲಕ್ಷಕ್ಕೂ ಮೀರದಂತೆ ಯಾವುದು ದುಡಿಮೆಯೋ ಅದನ್ನು ನಿಗಮವೇ ಭರಿಸಿ ಸಹಾಯಧನವನ್ನು ನೀಡಲಾಗುತ್ತಿದೆ.

1244 (1086) ಶ್ರೀ ಐವಾನ್ ನಿಗ್ಲಿ (ನಾಮಾಂಕಿತ) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

A) Whether the Government is aware of the fact that Corporation Bank which has been entrusted to issue of Stamp papers;

B) Is it not a fact that the Corporqation Bank is not co-operation in issuing the stamp paper to the General public;

C) If so, will the Government entrust this responsibility to any other Nationlised Banks for the benefit of General public?

ಶ್ರೀ ಜಗದೀಶ್ ಶೆಟ್ಟರ್ (ಕಂದಾಯ ಸಚಿವರು) :

A) Yes
ಹೌದು

B) No
ಇಲ್ಲ

C) In addition to the Corporation Bank Document Sheets are also being sold through State Bank of Mysore, State Bank of Hyderabad and State Bank of India.

ದಸ್ತಾವೇಜು ಸೀಟುಗಳನ್ನು ಕಾರ್ಪೊರೇಶನ್ ಬ್ಯಾಂಕ್ ಅಲ್ಲದೆ ಸ್ಟೇಟ್ ಬ್ಯಾಂಕ್ ಆಫ್ ಮೈಸೂರು, ಸ್ಟೇಟ್ ಬ್ಯಾಂಕ್ ಆಫ್ ಹೈದರಾಬಾದ್ ಮತ್ತು ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ ಬ್ಯಾಂಕುಗಳಿಂದಲೂ ಸಹ ಮಾರಾಟ ಮಾಡಲಾಗುತ್ತಿದೆ.